**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂ:129/2011</u>** **ಡಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **02.08.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟಿ ಸವಾಲು:** ವಾದಿ ಪರ ಶ್ರೀ **ಎಸ್.ಜೆ** ವಕೀಲರಿಂದ:</u>

ನಾನು ನಿವೃತ್ತ ಉಪಾದ್ಯಾಯ ಎಂದರೆ ಸರಿ. ನಿಮಗೆ ಕನ್ನಡ ಹಾಗೂ ಆಂಗ್ಲ ಭಾಷೆ ಎರಡು ಓದಲು-ಬರೆಯಲು ಬರುತ್ತದೆ ಎಂದರೆ ಸಾಕ್ಷಿ ನನಗೆ ಆಂಗ್ಲ ಭಾಷೆ ಮಾತ್ರ ಓದಲು-ಬರೆಯಲು ಬರುತ್ತದೆ ಎಂದು ನುಡಿಯುತ್ತಾರೆ. ನಾನು ವಿಧ್ಯಾಭ್ಯಾಸ ಮಾಡುವ ಸಮಯದಲ್ಲಿ ಕನ್ನಡ ಭಾಷೆ ಇತ್ತು ಎಂದರೆ ಸರಿ. ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ನನ್ನ ಸಹೋದರಿಯರ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಸ್ಥಿರಾಸ್ತಿಗಳ ಬದಲು ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಆದಕಾರಣ ನನ್ನ ತಂದೆಯವರು ಸದರಿಯವರಿಗೆ ಸ್ಥಿರಾಸ್ತಿಗಳಲ್ಲಿ ಭಾಗ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಯಾರ ಯಾರಿಗೆ ಎಷ್ಟು ಆಸ್ತಿಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರಿಗೂ ಸೇರಿ 1 ಎಕರೆ ಜಮೀನನ್ನು ಹಂಚಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ವಾದಿಗೆ 1 ಎಕರೆ ಜಮೀನನ್ನು ಇಂಡುವಾಳ ಗ್ರಾಮದಲ್ಲಿ ನೀಡಿರುತ್ತಾರೆ. ನನಗೆ ಯಡದೊರೆ ಗ್ರಾಮದಲ್ಲಿ 1 ಎಕರೆ ಜಮೀನು ನೀಡಿರುತ್ತಾರೆ. 2 ನೇ ಪ್ರತಿವಾದಿಗೂ ಸಹ ಅದೇ ಗ್ರಾಮದಲ್ಲಿ 1 ಎಕರೆ 16 ಗುಂಟೆ ಜಮೀನು ನೀಡಿರುತ್ತಾರೆ. ಸದರಿ ಜಮೀನುಗಳ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಂದೆಯವರು ತಮ್ಮ ಪಾಲಿಗೆ 1 ಎಕರೆ 6 ಗುಂಟೆ ಜಮೀನು ಉಳಿಸಿಕೊಂಡಿರುತ್ತಾರೆ. ಸದರಿ ಆಸ್ತಿಯೇ ದಾವಾ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಂದೆಯವರು ಮೂರು ಜನಕ್ಕೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾಯಿ ಹಾಗೂ ತಂದೆ ನನ್ನ ಜೊತೆ ಇರುವ ಕಾರಣ ಸದರಿ ಆಸ್ತಿಯನ್ನು ನನಗೆ ನೀಡಿರುತ್ತಾರೆ, ಸದರಿ ಆಸ್ತಿಯನ್ನು ನನಗೆ ನೀಡಿರುವ ಬಾಬ್ತು ದಾಖಲೆ ಇರುತ್ತದೆ. ನನ್ನ ತಂದೆಯವರು ನನಗೆ ಮಾಡಿಕೊಟ್ಟ ಪತ್ರದ ಹೆಸರು ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ಪಂಚಾಯತಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ

ದಾಖಲೆಯನ್ನು ಮಾಡಿಕೊಟ್ಟ 2 ವರ್ಷಗಳ ಕಾಲ ನನ್ನ ತಂದೆ ಬದುಕಿದ್ದರು. ಸದರಿ ದಾಖಲೆಯನ್ನು ನನ್ನ ತಂದೆಯವರು ತಿ.ನರಸೀಪುರದಲ್ಲಿ ಬರೆಸಿರುತ್ತಾರೆ. ಸದರಿ ದಾಖಲೆ ಬರೆದ ವ್ಯಕ್ತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ಪತ್ರವನ್ನು ಬರೆದ 6 ತಿಂಗಳಿಂದ 1 ವರ್ಷದ ಅವಧಿಯಲ್ಲಿ ನನಗೆ ಸದರಿ ವಿಷಯ ತಿಳಿಸಿರುತ್ತಾರೆ.

ನನ್ನ ತಂದೆಯವರು ನಾನು ಹೇಳಿದಂತೆ ಯಾವುದೇ ಪತ್ರವನ್ನು ಮಾಡಿರುವುದಿಲ್ಲ, ಸದರಿ ವಿಷಯವನ್ನು ನನಗೆ ತಿಳಿಸಿರುವುದಿಲ್ಲ ಹಾಗೂ ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಸದರಿ ದಾಖಲೆಯನ್ನು 1998 ರಲ್ಲಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಊರಿನ ಮುಖಂಡರು, ಖರೀರ್ ಉರ ರೆಹಮಾನ, ನಜೀರ ಅಹ್ಮದ್, ನೂರಹುಸೇನ, ಆದಿಲ್ ಶಮೀನ್‌ರವರುಗಳು ಸಹಿ ಮಾಡಿರುತ್ತಾರೆ. ನಾನು ಸಹ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನನ್ನ ತಂದೆ 1998 ರಲ್ಲಿ ಯಾವುದೇ ಪತ್ರ ಮಾಡಿಕೊಟ್ಟಿರುವುದಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಖಾತೆ ಮಾಡಿಕೊಳ್ಳುವ ಸಮಯದಲ್ಲಿ ವಾದಿಗೆ ನೋಟಿಸ್ ನೀಡಿರುತ್ತೇನೆ. ನಾನು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿಯವರಿಗೆ ನೀಡಿದ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಖಾತೆ ಮಾಡಲು ನೀಡಿದ ಅರ್ಜಿಗೆ ನನ್ನ ಸಹೋದರ-ಸಹೋದರಿಯವರು ಸಹಿ ಮಾಡಿದ್ದು, ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನನ್ನ ತಂದೆ ವಯಸ್ಸಾದ ಕಾರಣ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ಯಾವುದೇ ಸಾಲ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಪಿ.ಎಲ್.ಡಿ ಬ್ಯಾಂಕಿನಲ್ಲಿ 1985-1986 ರಲ್ಲಿ ಸಾಲ ಮಾಡಿರುತ್ತಾರೆ. ಸದರಿ ಸಾಲವನ್ನು 10 ವರ್ಷದಲ್ಲಿ ಅಂದರೆ 1994-1995 ರಲ್ಲಿ ತೀರಿಸಿರುತ್ತಾರೆ. ನನ್ನ ತಂದೆ ಯಾವುದೇ ಸಾಲ ಮಾಡಿರುವುದಿಲ್ಲ ಹಾಗೂ ಸದರಿ ಸಾಲವನ್ನು ತೀರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-1 ಕ್ಕೆ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನನ್ನ ತಂದೆಯವರು ಬರೆಸಿರುತ್ತಾರೆ ಎಂದರೆ ಸಾಕ್ಷಿಯು ಮೊದಲನೇ ಪುಟದಲ್ಲಿರುವ ಸಹಿ ಹಾಗೂ 2 ನೇ ಪುಟದಲ್ಲಿರುವ ಸಹಿ ಹೊಂದಾಣಿಕೆ ಆಗುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ತಮ್ಮ ಭಾಗಕ್ಕೆ ಉಳಿಸಿಕೊಂಡು 1 ಎಕರೆ 6 ಗುಂಟೆ ಜಮೀನಿನಲ್ಲಿ ವಾದಿಗೆ 16 ಗುಂಟೆ ಹಾಗೂ ಪ್ರತಿವಾದಿಗಳಿಗೆ ತಲಾ 15 ಗುಂಟೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ವಿಭಾಗ ಮಾಡಿಕೊಂಡಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪೌತಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಾನು ನಮ್ಮ ವಕೀಲರು ಸಲ್ಲಿಸಿದ ಪ್ರತಿವಾದ ಪತ್ರಕ್ಕೆ ನಾನು ಸಂಗತಿಗಳನ್ನು ತಿಳಿಸಿರುತ್ತೇನೆ. ನಾನು ಹಾಗೂ ನನ್ನ ತಮ್ಮ ಅಂದರೆ 2 ನೇ ಪ್ರತಿವಾದಿ ಚೆನ್ನಾಗಿ ಇದ್ದೇವೆ ಎಂದರೆ ಸರಿ. ನಾನು ಹಾಗೂ 2 ನೇ ಪ್ರತಿವಾದಿಗೆ ವಾದಿಗೆ ಭಾಗ ಕೊಡಬಾರದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**